ಲುಕ್ಸಾನಾಗಿದೆ. ಅದಕ್ಕೋಸ್ಕರ ಸರ್ಕಾರಕ್ಕೆ ಒತ್ತಾಯ ಮಾಡುತ್ತಿರುವುದೇನೆಂದರೆ, ಜಿಲ್ಲಾಡಳಿತ ವಿಫಲವಾಗಿದ್ದರಿಂದ ಈ ಘಟನೆ ನಡೆಯಲು ಕಾರಣವಾಗಿದೆ. ಪ್ರಕರಣವನ್ನು ಸರಿಯಾಗಿ handle ಮಾಡಲಿಲ್ಲ. ಜಿಲ್ಲಾಡಳಿತದ ಅಧಿಕಾರಿಗಳ ಮೇಲೆ ಸರಿಯಾದ ಕಾನೂನು ಕ್ರಮವನ್ನು ಸರ್ಕಾರ ಕೈಗೊಳ್ಳಬೇಕಾಗಿದೆ. ಮಾನ್ಯ ಗದ್ದಿಯವರ ಬೇಜವಾಬ್ದಾರಿತನದಿಂದ ಈ ಘಟನೆ ನಡೆದಿದೆ. ಹೀಗಾಗಿ ಅವರು ರಾಜೀನಾಮೆ ಕೊಡಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಸರ್ಕಾರದ ಬೇಜವಾಬ್ದಾರಿತನದಿಂದ, ಅಲ್ಲಿಯ ಆಡಳಿತದ ಬೇಜವಾಬ್ದಾರಿತನದಿಂದ ಇವ್ಹೊತ್ತು ಬಸಾಪುರ ಗ್ರಾಮದ ಜನರಿಗೆ ತೊಂದರೆಯುಂಟಾಗಿದೆ. ಕೋಟ್ಯಾಂತರ ರೂಪಾಯಿಗಳನ್ನು ಲುಕ್ಸಾನುವುಂಟಾಗಿರುವುದಕ್ಕೆ ಪರಿಹಾರ ಕೊಡುವಂಥ ಕೆಲಸ ಸರ್ಕಾರದಿಂದ ಆಗಬೇಕೆಂದು ಒತ್ತಾಯ ಮಾಡುತ್ತಿದ್ದೇನೆ. ಇನ್ನೊಂದು ವಿಚಾರವೇನೆಂದರೆ, ಕುಡಿಯುವ ನೀರಿನ ಸಲುವಾಗಿ ಬಸಾಪುರ ಗ್ರಾಮದವರಿಗೆ ಇಷ್ಟೆಲ್ಲಾ ತೊಂದರೆಗಳು ಉಂಟಾಗಿರುವುದರಿಂದ ಅಣ್ಣಿಗೇರಿಗೆ ಏನು ಪೈಪ್ ಲೈನ್ ಹಾಕಿದ್ದಾರೆ, ಬಸಾಪುರ ಗ್ರಾಮಕ್ಕೂ ಕುಡಿಯುವ ನೀರಿನ ಸಮಸ್ಯೆಯನ್ನು ತಕ್ಷಣ ಪರಹರಿಸಲು ಯೋಜನೆ ಕಾರ್ಯಗತಗೊಳಿಸಬೇಕೆಂದು ಸಹ ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಮಾನ್ಯ ವಿರೋಧ ಪಕ್ಷದ ನಾಯಕರು ಪ್ರಸ್ತಾಪಿಸಿರುವ ವಿಚಾರದ ಬಗ್ಗೆ ವರದಿ ತರಿಸಿ ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರ ಕೊಡಿಸುವ ಪ್ರಯತ್ನ ಮಾಡುತ್ತೇನೆ.

ಆ) ಕೃಷ್ಣ ನದಿಯ ಬಗ್ಗೆ ಕರ್ನಾಟಕ, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರಗಳ ನಡುವೆ ಇರತಕ್ಕ ವಿವಾದದ ವಿಚಾರದಲ್ಲಿ ಕೇಂದ್ರ ಸರ್ಕಾರದ ನಿಲುವು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಉಪಾಧ್ಯಕ್ಷರೆ, ನಿನ್ನೆ ದಿವಸ ಕೇಂದ್ರ ಸರ್ಕಾರದವರು ಕೃಷ್ಣಾ ನದಿಯ ಬಗ್ಗೆ ನಮಗೂ, ಆಂಧ್ರಪ್ರದೇಶಕ್ಕೂ ಮತ್ತು ಮಹಾರಾಷ್ಟ್ರಕ್ಕೂ ಇರುವ ವಿವಾದದ ವಿಚಾರದಲ್ಲಿ ಇನ್ನು ಹದಿನೈದು ದಿವಸದೊಳಗೆ ಈ ವಿವಾದವನ್ನು ಬಗೆಹರಿಸುವುದಕ್ಕೆ ಬೇಕಾಗಿರುವಂಥ ನ್ಯಾಯಮಂಡಳಿಯನ್ನು ರಚನೆ ಮಾಡುತ್ತೇವೆಂದು ಘೋಷಣೆ ಮಾಡಿರುವುದು ಸಂತೋಷದ ವಿಚಾರವಾಗಿದೆ. ಅದೇ ಸಂದರ್ಭದಲ್ಲಿ ನಮ್ಮ ರಾಜ್ಯದ ಲೋಕಸಭಾ ಸದಸ್ಯರು ಪಕ್ಷಾತೀತವಾಗಿ ಲೋಕಸಭೆಯಲ್ಲಿ ಇದರ ಬಗ್ಗೆ ಪ್ರಸ್ತಾಪ ಮಾಡಿ ಆಂಧ್ರಪ್ರದೇಶ ಸರ್ಕಾರದವರು ಕೇಂದ್ರ ಸರ್ಕಾರದ ಪರವಾನಗಿ ಪಡೆಯದೆ ಯಾವ್ಯಾವ ಯೋಜನೆಗಳನ್ನು ಪ್ರಾರಂಭಿಸಿದ್ದಾರೋ, ಅದನ್ನು ನಾವು ಪರೀಕ್ಷೆ ಮಾಡುತ್ತೇವೆಂದು ಮತ್ತು ಆ ರೀತಿ ಅಕ್ರಮವಾಗಿ ಯೋಜನೆಗಳು ನಡೆಯುತ್ತಿದ್ದರೆ ಅವುಗಳನ್ನು ನಿಲ್ಲಿಸುತ್ತೇವೆಂಬ ಭರವಸೆಯನ್ನೂ ಸಹ ಕೇಂದ್ರ ಸರ್ಕಾರ ಕೊಟ್ಟಿರುವುದರ ಬಗ್ಗೆ ನಾನು ಹರ್ಷ ವ್ಯಕ್ತಪಡಿಸುತ್ತಾ ಈ ಬಗ್ಗೆ ಸರ್ಕಾರದ ನಿಲುವನ್ನು ಕೇಳಬಯಸುತ್ತೇನೆ. ಇದು ಮೊದಲನೆಯದು. ಕೃಷ್ಣಾ ವಿವಾದದ ವಿಚಾರದಲ್ಲಿ ಕೇಂದ್ರ ಸರ್ಕಾರ ಹೇಳಿರುವ ವಿಚಾರವನ್ನು ನಾನು ಸ್ವಾಗತಿಸುತ್ತಾ ಅದರ ಜೊತೆಗೆ ಆಂಧ್ರಪ್ರದೇಶ ಸರ್ಕಾರದವರು ಅಕ್ರಮವಾಗಿ ಇದುವರೆವಿಗೂ ಯೋಜನೆಗಳನ್ನು ಕೈಗೊಳ್ಳುತ್ತಿದ್ದರೂ ನಮ್ಮ ಮೇಲೆ ಅವರು ತಪ್ಪು ಹೊರಿಸುತ್ತಿದ್ದು, ಅದನ್ನು ಕೇಂದ್ರ ಸರ್ಕಾರ ಇವ್ಹೊತ್ತು ಗಮನಿಸಿರುವುದು ಇನ್ನೊಂದು ಒಳ್ಳೆಯ ಬೆಳವಣಿಗೆ ಎಂದು ಹೇಳುತ್ತೇನೆ. ಇದರ ಜೊತೆಗೆ ಪ್ರಮುಖವಾಗಿರುವ ಮತ್ತೊಂದು ವಿಚಾರವನ್ನು ಪ್ರಸ್ತಾಪಿಸಬಯಸುತ್ತೇನೆ. ಮಾನ್ಯ

ಜಲ ಸಂಪನ್ಮೂಲ ಮಂತ್ರಿಗಳು ಇದಕ್ಕೆ ಉತ್ತರಿಸಬೇಕೆಂದು ನಿರೀಕ್ಷಿಸುತ್ತೇನೆ. ಏಳನೆಯ ತಾರೀಖು ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ minitoring committee meeting ಅನ್ನು ಕೇಂದ್ರ ಸರ್ಕಾರ ಕರೆದಿದೆ ಎಂದು ನಾನು ಕೇಳಿದ್ದೇನೆ. ನಿಮಗೆ ಗೊತ್ತಿರುವಂತೆ ಮೈಸೂರು, ಮಂಡ್ಯ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಬರಗಾಲದ ಪರಿಸ್ಥಿತಿ ಇದೆ. ಕೆ.ಆರ್.ಎಸ್. ಅಥವಾ ಕಬಿನಿಯ ಕೆಳಗಡೆ ಇರತಕ್ಕಂಥ ಜಲಾಶಯಗಳಲ್ಲಿ ನಾವು ನೀರನ್ನು ತುಂಬಿಕೊಳ್ಳುವ ಪರಿಸ್ಥಿತಿಯಲ್ಲಿ ಇಲ್ಲವೆಂಬುದು ತಮಗೆ ಗೊತ್ತಿದೆ. ತಮಿಳುನಾಡಿನವರು ಯಾವ ರೀತಿ ಬರತಕ್ಕಂಥ ನೀರನ್ನು ಬೇರೆ ಬೇರೆ ಕೆರೆಗಳಲ್ಲಿ ತುಂಬಿಕೊಂಡು ನಿಲ್ಲಿಸಿಕೊಳ್ಳಬಹುದು. ಆ ಪರಿಸ್ಥಿತಿಯಲ್ಲಿ ಕಾವೇರಿ ರೈತರುಗಳು ಇಲ್ಲ ಎಂಬುದು ತಮಗೆ ಗೊತ್ತಿದೆ. ಈಗಾಗಲೇ ಕಾವೇರಿ ಜಲಾನಯನ ಪ್ರದೇಶದಲ್ಲಿರುವ ರೈತರು ಸರ್ಕಾರದ ಮಾತನ್ನು ಕೇಳಿಕೊಂಡು ಬೆಳೆಯನ್ನು ಹಾಕದಿರುವುದು ತಮಗೆ ಗೊತ್ತಿದೆ. ನನ್ನ ಅನುಭವದಲ್ಲಿ ಹೇಳುವುದಾದರೆ, ಮೈಸೂರು, ಮಂಡ್ಯ ಚಾಮರಾಜನಗರ, ಬೆಂಗಳೂರು ಹೀಗೆ ಐದಾರು ಜಿಲ್ಲೆಗಳಿಗೆ ಹೆಚ್ಚಿಗೆ ಮಳೆ ಬರತಕ್ಕದ್ದು ಆಗಸ್ಟ್ ಸೆಪ್ಟೆಂಬರ್, ಅಕ್ಟೋಬರ್ 15ನೇ ತಾರೀಖಿಗೆ ಮುಗಿದುಹೋಗುತ್ತದೆ. ನಮಗೆ ಮೇ, ಜೂನ್ ತಿಂಗಳಿನಲ್ಲಿ ಒಂದು ಸಲ ಮಳೆಯಾಗಬೇಕಾಗಿತ್ತು. ಇದುವರೆಗೆ ನಮಗೇನು ಮಳೆಯಾಗಬೇಕಾಗಿತ್ತು. ಅದರಲ್ಲಿ ಶೇಕಡಾ 40 ರಷ್ಟು ಮಾತ್ರ ಮಳೆಯಾಗಿರತಕ್ಕದ್ದು. ಎಲ್ಲಾ ಕೆರೆಗಳೂ ಒಣಗಿಹೋಗಿದೆ. ಯಾವ ಕೆರೆಯಲ್ಲೂ ನೀರಿಲ್ಲ. ನಾವು ಇಂಥ ಪರಿಸ್ಥಿತಿಯಲ್ಲಿ ಇರತಕ್ಕದ್ದು ತಮಗೆ ಗೊತ್ತಿದೆ. ಇಂಥ ಸಂದರ್ಭದಲ್ಲಿ ಪ್ರತಿನಿತ್ಯವೂ ನೀರನ್ನು ಬಿಡುತ್ತಿರತಕ್ಕದ್ದನ್ನು ನಾವು ಕೇಳೀದ್ದೇವೆ. ಐದು ಸಾವಿರ ಕ್ಯೂಸೆಕ್ಸ್ ನೀರನ್ನು ತಮಿಳುನಾಡಿಗೆ ಬಿಡುತ್ತಿದ್ದಾರೆ ಎಂಬ ಮಾತನ್ನು ನಮ್ಮ ಗೌರವಾನ್ವಿತ ರಾಜ್ಯಸಭಾ ಸದಸ್ಯರೊಬ್ಬರು ರಾಜ್ಯಸಭೆಯಲ್ಲಿ ಹೇಳಿರತಕ್ಕದ್ದನ್ನು ಸ್ವತಃ ಮಾಧ್ಯಮದಲ್ಲಿ ನೋಡಿದ್ದೇನೆ. ಇಂಥ ಸಂದರ್ಭದಲ್ಲಿ ರಾಜ್ಯ ಸರ್ಕಾರದ ನಿಲುವೇನು? ಮಾನಿಟರಿಂಗ್ ಕಮಿಟಿಯ ಮುಂದೆ ತಾವೇನು ಮಾಡುವವರಿದ್ದೀರಿ ಎಂಬುದನ್ನು ಹೇಳಬೇಕು. ಆಂಧ್ರಪ್ರದೇಶದ ವಿಚಾರದಲ್ಲಿ ಅವರು ಮಾಡುತ್ತಿದ್ದ ಅನ್ಯಾಯವನ್ನು ಪಕ್ಷಾತೀತವಾಗಿ ನಾವೆಲ್ಲಾ ಕಳೆದ ಹಲವಾರು ವರ್ಷಗಳ ಹೋರಾಟ ಮಾಡಿದ್ದರ ಫಲವಾಗಿ, ಮತ್ತು ಮೂರನೇ ನ್ಯಾಯಮಂಡಳಿಯನ್ನು ರಚನೆ ಮಾಡಬೇಕೆಂದೇನು ಒತ್ತಾಯ ಮಾಡುತ್ತಿದ್ದೇವೆ. ಅದಕ್ಕೆ ಒಪ್ಪಿರತಕ್ಕದ್ದು ಇವತ್ತು ಸಂತೋಷಕರವಾದ ಬೆಳವಣಿಗೆ. ಅದೇ ರೀತಿ, ಕಾವೇರಿ ವಿಚಾರದಲ್ಲೂ ನಾವು ಬಹಳ ಡಿಸ್ಟೆಸ್ ನಲ್ಲಿದ್ದೇವೆ. ತಾವೇ ಕೆಲವು ಸಂದರ್ಭದಲ್ಲಿ ಹೇಳಿರುವಂತೆ, ಕಳೆದ 29–30 ವರ್ಷಗಳಲ್ಲಿ ಕೆ.ಆರ್.ಎಸ್.ನ ನೀರಿನ ಮಟ್ಟ ಈ ರೀತಿ ಇರಲಿಲ್ಲ. ಇಂಥ ಸಂದರ್ಭದಲ್ಲಿ ನಾವು ನೀರನ್ನು ಬಿಟ್ಟರೆ ನಮ್ಮ ಪರಿಸ್ಥಿತಿ ಏನಾಗುತ್ತದೆ ಎಂಬುದು ಒಂದು. ಕುಡಿಯುವುದಕ್ಕೂ ನೀರು ಇರುವುದಿಲ್ಲ ಎಂಬುದು ಎರಡನೆಯದು. ಮೂರನೆಯದು, ಬಹಳ ಪ್ರಮುಖವಾಗಿ ನಾಡಿದ್ದು ನಡೆಯತಕ್ಕ ಮಾನಿಟರಿಂಗ್ ಸಭೆಯಲ್ಲಿ ಸರ್ಕಾರದ ನಿಲುವೇನು ಎಂಬುದನ್ನು ತಿಳಿಸಬೇಕಾಗುತ್ತದೆ. ಜನರಲ್ ಆಗಿ ಇಂಥ ಸಂದರ್ಭದಲ್ಲಿ ನಮ್ಮ ಮುಖ್ಯಮಂತ್ರಿಗಳು ಅನೇಕ ಸಂದರ್ಭಗಳಲ್ಲಿ ನಮ್ಮನ್ನು ಸಂಪರ್ಕ ಮಾಡಿದ್ದಾರೆ. ಅವರು ಪಾದಯಾತ್ರೆ ಕಾರ್ಯಕ್ರಮ ಹಾಕಿಕೊಂಡಮೇಲೆ ನಮ್ಮನ್ನೆಲ್ಲಾ ಕೈಬಿಟ್ಟಿದ್ದಾರೆ. ಅಲ್ಲಿಯವರೆಗೆ ಈ ವಿಚಾರದಲ್ಲಿ ನಮ್ಮಗಳ ಜೊತೆ ದೂರವಾಣಿಯಲ್ಲಿ ಮಾತನಾಡಿ ನಮ್ಮ ನಿಲುವೇನಿದೆ, ಈ ರೀತಿ ಮಾಡಬೇಕೆಂದಿದ್ದೇವೆಂದು ಹೇಳುತ್ತಿದ್ದರು. ಪಾದಯಾತ್ರೆ ಪ್ರಾರಂಭ ಮಾಡಿದಮೇಲೆ ಅದನ್ನು ನಿಲ್ಲಿಸಿಬಿಟ್ಟಿದ್ದಾರೆ. ಏಕೆ ಎಂಬುದು

ನಮಗೆ ಗೊತ್ತಿಲ್ಲ? ಅದಕ್ಕೋಸ್ಕರ ಸದನದಲ್ಲಿ ರಾಜ್ಯದ ಹಿತವನ್ನು ಕಾಪಾಡುವ ದೃಷ್ಟಿಯಿಂದ ಇದನ್ನು ಪ್ರಸ್ತಾಪ ಮಾಡಿದ್ದೇನೆ. ಇದಕ್ಕೆ ಸರ್ಕಾರದಿಂದ ಪ್ರತಿಕ್ರಿಯೆಯನ್ನು ನಿರೀಕ್ಷೆ ಮಾಡುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ (ಜಲಸಂಪನ್ಮೂಲಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಿಂಧ್ಯಾರವರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದರು. ಪಾರ್ಲಿಮೆಂಟ್ ನಲ್ಲಿ ನಮ್ಮ ರಾಜ್ಯದ ನಿಲುವುಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿ ನಮ್ಮ ರಾಜ್ಯದ ಸರಿ ದಾರಿಯ ಬಗ್ಗೆ ಪಕ್ಷಾತೀತವಾಗಿ ಎಲ್ಲಾ ಲೋಕಸಭೆಯ ಸದಸ್ಯರುಗಳು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಿಕೊಂಡುವುದಷ್ಟೇ ಅಲ್ಲ, ನಮ್ಮ ರಾಜ್ಯದ ವಿರುದ್ಧ ಅಪಪ್ರಚಾರ ಮಾಡತಕ್ಕ ಪ್ರಯತ್ನವನ್ನು ಕೆಲವು ರಾಜಕೀಯ ಆಸಕ್ತ ವರ್ಗಗಳು ಏನು ಮಾಡುತ್ತಿದ್ದವೋ, ಅವರಿಗೆ ಸರಿಯಾದ ಉತ್ತರವನ್ನು ಕೊಟ್ಟಿದ್ದಾರೆ. ಆದ್ದರಿಂದ, ಕರ್ನಾಟಕ ಜನತೆಯ ಪರವಾಗಿ ಅವರಿಗೆ ಅಭಿನಂದಿಸಲು ಇಚ್ಛೆಪಡುತ್ತೇನೆ. ಅದರ ಜೊತೆಗೆ ನಮ್ಮ ರಾಜ್ಯ ತಾಳಿರತಕ್ಕಂಥ ನಿಲುವುಗಳ ಬಗ್ಗೆ ಮಾನ್ಯ ರಾಷ್ಟ್ರಪತಿಗಳಿಗೆ ಮನವರಿಕೆ ಮಾಡಿಕೊಡುವಂಥ ಪ್ರಯತ್ನ ಮಾಡಿದ್ದೇವೆ. ಅದು ಪರಗೋಡು ವಿಚಾರ ಇರಬಹುದು. ಅಪ್ಪರ್ ತುಂಗಾ ವಿಚಾರ ಇರಬಹುದು. ಅವುಗಳ ಬಗ್ಗೆ ಉಪಪ್ರಧಾನಿ ಮಂತ್ರಿಯವರ ಜೊತೆ ವಿರೋಧ ಪಕ್ಷದ ನಾಯಕರು, ಸಿಂಧ್ಯಾರವರು ಎಲ್ಲರನ್ನೂ ಜೊತೆಗೂಡಿಸಿಕೊಂಡು ಹೋಗಿ ಪ್ರಸ್ತಾಪ ಮಾಡಿದ್ದೇವೆ. ಮಾನ್ಯ ಸಿಂಧ್ಯಾರವರು ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ನಮ್ಮನ್ನು ಕೇಳುವುದನ್ನೇಕೆ ಬಿಟ್ಟಿದ್ದಾರೋ ಎಂದು ಹೇಳಿದರು. ಹಾಗೇನೂ ಇಲ್ಲ. ಪರಗೋಡು ವಿಚಾರದಲ್ಲಿ ತಮ್ಮಿಂದ ಸಂಪೂರ್ಣವಾದ ಮಾರ್ಗದರ್ಶನವನ್ನು ಪಡೆದುಕೊಂಡಿದ್ದೇವೆ. ತಮ್ಮ ಜೊತೆ ಸಮಾಲೋಚನೆ ಮಾಡಿದ್ದೇವೆ. ಅಂತರ್ರಾಜ್ಯ ನದಿ ವಿವಾದದ ಪ್ರಶ್ನೆಗಳು ಬಂದಾಗಲೆಲ್ಲಾ ತಮ್ಮನ್ನೆಲ್ಲಾ ವಿಶ್ವಾಸಕ್ಕೆ ತೆಗೆದುಕೊಳ್ಳುವ ಪ್ರಯತ್ನವನ್ನು ನಾವು ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಪರಗೋಡು ವಿಚಾರದಲ್ಲಿ ಮತ್ತು ಅಪ್ಪರ್ ತುಂಗಾ ವಿಚಾರದಲ್ಲಿ ನಮಗೆ ಪತ್ರಗಳನ್ನು ಕಳುಹಿಸಿದ್ದಾರೆ. ಅಪ್ಪರ್ ತುಂಗಾ ವಿಚಾರದಲ್ಲಿ ಆ ಪ್ರೊಸೀಡಿಂಗ್ಸ್‌ನ ಡೀಟೇಲ್ಸ್ ಬಂದಿದೆ. ನಿನ್ನೆ ಮಾತನಾಡತಕ್ಕ ಸಂದರ್ಭದಲ್ಲಿ ಮಾನ್ಯ ಅರ್ಜುನ್ ಚರಣ್ ಸೇಥಿಯವರು ಸ್ವಲ್ಪಮಟ್ಟಿನ ವಿವರವನ್ನು, ನಮ್ಮ ರಾಜ್ಯದ ನಿಲುವನ್ನು ಅವರು ಕಡೆಗಾಣಿಸಿಲ್ಲ. ಎನ್ನುವುದನ್ನು ಒಂದು ರೀತಿ ಸಮಾಧಾನದಿಂದ ನಾವು ನೋಡಬಹುದಾದರೂ, ನಮ್ಮ ಲೋಕಸಭಾ ಸದಸ್ಯರು ನಮ್ಮ ರಾಜ್ಯದ ನಿಲುವೇನಿದೆ ನಮ್ಮ ವಾದವೇನಿದೆ ಎಂದರೆ, ಆಂಧ್ರಪ್ರದೇಶ ಸರ್ಕಾರದವರು ಸರ್‌ಪ್ಲಸ್ ವಾಟರ್‌ನ್ನು ಹೆಚ್ಚುವರಿ ನೀರನ್ನು ಕಬಳಿಸಿಕೊಳ್ಳಬೇಕು ಎಂಬ ಹುನ್ನಾವರದಿಂದ ಏನು ಪರ್ಮನೆಂಟ್ ಇನ್‌ಫ್ರಾಸ್ಟ್ರಕ್ಚರ್‌ನ್ನು ಕ್ರಿಯೇಟ್ ಮಾಡುತ್ತಿದ್ದಾರೆ, ಅದು ತೆಲಗುಗಂಗಾ ಯೋಜನೆ ಇರಬಹುದು. ಪುಲಿಚಿಂತಲು ಇರಬಹುದು. ಶ್ರೀಶೈಲಂ ರೈಟ್ ಬ್ಯಾಂಕ್ ಇರಬಹುದು. ಈ ಯೋಜನೆಗಳನ್ನು ನಿಲ್ಲಿಸಬೇಕು. ಅದನ್ನು ತಡೆಹಿಡಿಯಿರಿ ಎಂದು ಹೇಳುವಂಥ ನಮ್ಮ ನಿಲುವು, ಒತ್ತಡ ಲೋಕಸಭೆಯಲ್ಲೂ ಆ ದಿಸೆಯಲ್ಲಿ ಬಂದಿರತಕ್ಕಂಥ ನ್ಯಾಯಯುತವಾದ ಮಾತುಗಳಿಗೆ ಕೇಂದ್ರ ಸರ್ಕಾರ ಇನ್ನೂ ಸ್ಪಂದಿಸಲಿಲ್ಲ, ಈ ವೇದಿಕೆಯನ್ನು ಉಪಯೋಗ ಮಾಡಿಕೊಂಡು ಆಂಧ್ರ ಸರ್ಕಾರದವರು ಕೈಗಿತ್ತಿಕೊಂಡಿರುವಂಥ ಈ ಸಪ್ಲಸ್ ವಾಟರ್‌ನ್ನು ಬಳಸಿಕೊಳ್ಳುವಂಥ ಯೋಜನೆಯನ್ನು, ಪರ್ಮನೆಂಟ್ ಇನ್‌ಫ್ರಾಸ್ಟ್ರಕ್ಚರ್‌ನ್ನು ಏನು ಕ್ರಿಯೇಟ್ ಮಾಡುತ್ತಿದ್ದಾರೆ. ಆ ಕೆಲಸಗಳನ್ನು ತಕ್ಷಣವೇ ನಿಲ್ಲಿಸುವಂತೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರದವರಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಬಹಳ ಪ್ರಮುಖವಾಗಿ ತಾವು ಗಮನಿಸಬೇಕಾಗಿರತಕ್ಕದ್ದು, ಮಾನ್ಯ ಕೇಂದ್ರದ ಸಚಿವರು ಆಂಧ್ರಪ್ರದೇಶದವರು ಹೆಚ್ಚುವರಿ ನೀರನ್ನು ಉಪಯೋಗಿಸಿಕೊಳ್ಳುವುದರ ಸಲುವಾಗಿ ಅಕ್ರಮವಾಗಿ ಕಟ್ಟುತ್ತಿರತಕ್ಕದ್ದು ನಮ್ಮ ಗಮನಕ್ಕೆ ಬಂದಿದೆ ಎಂಬ ಮಾತನ್ನು ಹೇಳಿದ್ದಾರೆ. ಆದ್ದರಿಂದ ಈ ಸಂದರ್ಭವನ್ನು ಉಪಯೋಗಿಸಿಕೊಂಡು ತಕ್ಷಣ ಅದನ್ನು ತಡೆಗಟ್ಟಲು ಆಜ್ಞೆ ಮಾಡಬೇಕೆಂಬ ಒತ್ತಾಯವನ್ನು ನಾವೆಲ್ಲರೂ ಒಕ್ಕೊರಲಿನಿಂದ ಮಾಡಬೇಕಾಗುತ್ತದೆ ಎಂಬುದು ನನ್ನ ಅಭಿಪ್ರಾಯ.

ಶ್ರೀ ಎಸ್. ಶಿವಾನಂದ ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, 91, 92...

ಶ್ರೀ ಹೆಚ್.ಕೆ. ಪಾಟೀಲ್ : ಅದು ಬೇರೆ ವಿಚಾರ....

Sri Shivananda S. Patil :I will not go into that. Whether the Krishna water utilization will come for a review? ನನಗೆ ಅದು ಬೇಕಾಗಿರುವುದು.

Sri H.K. Patil : That is a subject for itself. I will deal with it separately. It is not a proper subject now.

ಶ್ರೀ ಎಸ್. ಶಿವಾನಂದ ಪಾಟೀಲ್ : ಮೊನ್ನೆ ಏನಾಯಿತು ಎಂದರೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಸಿಂಧ್ಯಾರವರು ಹೇಳಿದಂತೆ, ಕೇಂದ್ರ ಸರ್ಕಾರದವರು ಆಂಧ್ರ ಸರ್ಕಾರದವರು ತೆಗೆದುಕೊಂಡಿರತಕ್ಕಂಥ ತೆಲುಗುಗಂಗಾ ಆಗಲಿ, ಪುಲಿಚಿಂತಲು ಆಗಲಿ, ಶ್ರೀಶೈಲಂ ರೈಟ್ ಬ್ಯಾಂಕ್ ಆಗಲಿ, ಅವು ಅಪ್ರೂವ್ಡ್ ಪ್ರಾಜೆಕ್ಟ್ ಎಂದು ಹೇಳಿಲ್ಲ. They are unapproved projects ಎನ್ನುವುದನ್ನು ಈಗಾಗಲೇ ಅವರು ಪ್ರಸ್ತಾಪ ಮಾಡಿದ್ದಾರೆ. ಆದರೆ ನಮಗೆ ಅಷ್ಟಕ್ಕೇ ನ್ಯಾಯ ಸಿಕ್ಕಿದಂತೆ ಆಗುವುದಿಲ್ಲ, ನಮಗೆ ನ್ಯಾಯ ಸಂಪೂರ್ಣವಾಗಿ ಸಿಗಬೇಕೆಂದರೆ, they are unapproved illegal projects. They have planned to utilize our excess water. In view of that Government of India should direct them to stop those works. ಎನ್ನುವಂಥ ನಮ್ಮ ಕರ್ನಾಟಕದ ನಿಲುವೇನಿದೆ, ಅದು ಪಕ್ಷೇತಿತವಾದ ಆ ನಿಲುವನ್ನು ಇನ್‌ವಾಲ್ವ್ ಮಾಡಿದ್ದೇವೆ. ಆ ನಿಲುವನ್ನು ಕೇಂದ್ರ ಸರ್ಕಾರ ಎತ್ತಿಹಿಡಿಯಬೇಕು, ಮತ್ತು ಆ ಒತ್ತಾಯವನ್ನು ಈ ಸಂದರ್ಭದಲ್ಲಿ ಮತ್ತೊಮ್ಮೆ ಕೇಂದ್ರ ಸರ್ಕಾರಕ್ಕೆ ನಾವು ಮಾಡುತ್ತೇವೆ. ಕಾವೇರಿ ವಿಚಾರದಲ್ಲಿ ಮಾನ್ಯ ಸಿಂಧ್ಯಾರವರು....

ಶ್ರೀ ಎಸ್. ಶಿವಾನಂದ ಪಾಟೀಲ್ : ಕೃಷ್ಣ ವಿಚಾರದಲ್ಲಿ ಕೇಂದ್ರ ಸರ್ಕಾರದವರು 2000ನೇ ತಿಂಗಳಿನಲ್ಲಿ ಒಂದು ಪತ್ರವನ್ನು ಬರೆದಿದ್ದಾರೆ. ಅದರ ಬಗ್ಗೆ ನನಗೆ ಕ್ಲಾರಿಫೀಕೇಷನ್ ಬೇಕು.

ಶ್ರೀ ಹೆಚ್.ಕೆ. ಪಾಟೀಲ್ : ಅದರ ಬಗ್ಗೆ ನೀವು ನನಗೆ....

ಶ್ರೀ ಎಸ್. ಶಿವಾನಂದ ಪಾಟೀಲ್ : ಜಗದೀಶ್ ಶೆಟ್ಟರ್‌ರವರು ಸುಮ್ಮನೆ ಕುಳಿತುಕೊಳ್ಳಬಾರದು. ಏಕೆಂದರೆ when they have written a common letter to all other states, ಮಹಾರಾಷ್ಟ್ರ ಆಂಧ್ರ ಮತ್ತು ತಮಿಳುನಾಡು ಎಲ್ಲಾ ರಾಜ್ಯಗಳಿಗೂ ಬರೆದಿದ್ದಾರೆ. ಅದರ ಮೇಲೆ ಇಲ್ಲಿ ಕೂಡ you could haave approached the Court. ನೀವು ಈಗ ಈ ಸದನದ ಮೂಲಕ ಕೇಂದ್ರ ಸರ್ಕಾರದಮೇಲೆ ಒತ್ತಡ ಮಾಡುವುದಕ್ಕಿಂತಲೂ, ಅವರು ಹೇಗೆ ಅಲಮಟ್ಟಿ ಎತ್ತರವನ್ನು ಹೆಚ್ಚು ಮಾಡಬಾರದು ಎಂದು ಸುಪ್ರೀಮ್ ಕೋರ್ಟ್‌ಗೆ ಹೋದರೋ ಹಾಗೆ ನೀವೇಕೆ ಹೋಗಲಿಲ್ಲಾ? ನನ್ನ ಪ್ರಶ್ನೆ ಇಷ್ಟೆ. You should have gone to Court.

ಶ್ರೀ ಹೆಚ್.ಕೆ. ಪಾಟೀಲ್ : ನನಗೆ ತೊಂದರೆ ಏನು....

ಶ್ರೀ ಜಗದೀಶ್ ಶೆಟ್ಟರ್ : ಇದರ ಬಗ್ಗೆಯೇ, ಹಿಂದೆ ಏನಾಗಿತ್ತು ಎಂದರೆ...

Sri H.K. Patil : I will reply to him. Then I will take up your point.

ಶ್ರೀ ಜಗದೀಶ್ ಶೆಟ್ಟರ್ : ಸ್ವಲ್ಪ intervene ಮಾಡುತ್ತಿದ್ದೇನೆ. ಏನಾಗಿದೆ ಎಂದರೆ, ಎಲ್ಲಾ ಪಕ್ಷಗಳ ಸಭೆಯನ್ನು ಕರೆದಂಥ ಸಂದರ್ಭದಲ್ಲಿ, ಅನಧಿಕೃತವಾದಂಥ ಯೋಜನೆಗಳನ್ನು ಅವರು ಪ್ರಾರಂಭ ಮಾಡಿದ್ದರೆ ನಮಗೆ ಗೊತ್ತಾಗುತ್ತಿದೆ. ಅದರ ಬಗ್ಗೆ ನಾವು ಕಾನೂನು ಸಮರವನ್ನೂ ಕೂಡ ಮಾಡುತ್ತೇವೆಂಬ ಮಾತನ್ನು ನೀವು ಒಂದು ಸಲ ಹೇಳಿದ್ದಿರಿ. ಆದರೆ ಅಲ್ಲಿಂದ ಇಲ್ಲಿಯವರೆಗೆ ಅದರ ಬಗ್ಗೆ ಏನೂ ಪ್ರೋಗ್ರೆಸ್ ಆಗಲಿಲ್ಲ. ನೀವು ಕೇವಲ ಮನವಿಪತ್ರ ತೆಗೆದುಕೊಂಡು ಹೋಗುವುದು ಕೊಡುವುದಷ್ಟೇ ಆಯಿತೇ ಹೊರತು ಅವರ ಅನಧಿಕೃತವಾದಂಥ ಯೋಜನೆಗಳನ್ನು ತಡೆಹಾಕುವುದರ ಬಗ್ಗೆ ಕೋರ್ಟ್‌ಗೆ ಹೋಗಿ ಕೇಸು ಹಾಕಿ ತಡೆಯಾಜ್ಞೆ ತೆಗೆದುಕೊಳ್ಳುವಂಥ ಕೆಲಸ ನಿಮ್ಮ ಕಡೆಯಿಂದ ಆಗಲೇ ಇಲ್ಲ.

ಶ್ರೀ ಹೆಚ್.ಕೆ. ಪಾಟೀಲ್ : ವಾಸ್ತವಿಕವಾಗಿ ಏನೇನಿದೆ ಎಂಬುದನ್ನು ನೀವು ತಿಳಿದುಕೊಂಡು., ನಾನು ಮಾನ್ಯ ಶಿವಾನಂದಪಾಟೀಲರಿಗೆ ಹೇಳುತ್ತೇನೆ, ನಾವು ಕೋರ್ಟ್‌ಗೆ ಹೋಗಿದ್ದೆವು. ಆ ಕೆಲಸಗಳನ್ನು ನಿಲ್ಲಿಸಬೇಕೆಂದೂ ಪ್ರಾರ್ಥನೆ ಮಾಡಿದೆವು. ಕೋರ್ಟ್‌ನವರು ನಮಗೆ ಒಂದು ನಿರ್ಣಯವನ್ನು ಕೊಟ್ಟರು. ಏನು ನಿರ್ಣಯ ಕೊಟ್ಟರು ಎಂದರೆ "There is a possibility for you to get remedy through Tribunal. You go to Tribunal'.

1.30 ಪಿ.ಎಂ

Government of India ದವರು Supreme Court ಗೆ ಒಂದು ಮುಚ್ಚಳಿಕೆಯನ್ನು ಬರೆದು ಕೊಟ್ಟರು. ಅವರು "We are prepared to constitute a Tribunal, if there is an application or if there is a complaint." ಎಂದು ಬರೆದು ಕೊಟ್ಟರು. ಆಗ ನಾವು ಕಂಪ್ಲೇಂಟ್ ಮಾಡಿದ ಮೇಲೂ ಸಹಿತ, believe me Speaker, Sir, ಇವತ್ತಿನವರೆಗೂ, ೩ ತಿಂಗಳು ಕಳೆದರೂ ನಮಗೆ Tribunal constitute ಆಗಲಿಲ್ಲ. ಅದಕ್ಕೇ ನಾವು ಇವತ್ತು ಒತ್ತಾಯ ಮಾಡುತ್ತಿದ್ದೇವೆ. ಕಾನೂನು ಪ್ರಕಾರ....

ಶ್ರೀ ಶಿವಾನಂದ ಎಸ್. ಪಾಟೀಲ್ : ನೀವು tribunal constitute ಮಾಡಬೇಕೆಂದು ಲೇಟಾಗಿ ಹೇಳಿದಿರಿ.

Mr. H.K. Patil : Whom are you trying to defend?

Mr. Shivananda S. Patil : There is a provision to constitute a Tribunal within a year if an applicant comes before the Central Government. But, you have gone very late. You have gone late. You could have gone in 2001 itself.

ಶ್ರೀ ಜಗದೀಶ್ ಶೆಟ್ಟರ್ : ನಾವು ಈಗಾಗಲೇ ಅರ್ಜಿ ಕೊಟ್ಟು ೩ ತಿಂಗಳಾಯಿತು. ಆದರೆ ಇನ್ನೂ Tribunal constitute ಆಗಲೇ ಇಲ್ಲ ಎಂದು ನೀವು ಕೇವಲ ಕೇಂದ್ರ

ಸರ್ಕಾರದವರನ್ನು blame ಮಾಡುವ ಕೆಲಸವನ್ನಷ್ಟೇ ಮಾಡುತ್ತಿದ್ದೀರಿ. ಆದರೆ ನೀವು ಯಾವಾಗ ಅರ್ಜಿಯನ್ನು ಕೊಡಬೇಕಾಗಿತ್ತು? ಆದರೆ ಯಾವಾಗ ಕೊಟ್ಟಿರಿ? ಸುಮ್ಮನೆ ಒಬ್ಬರ ಮೇಲೊಬ್ಬರು un-necessary ಯಾಗಿ pinch ಮಾಡಿ blame ಮಾಡುವುದು ಬೇಡ.....

ಶ್ರೀ ಎಚ್.ಕೆ. ಪಾಟೀಲ್ : ನಾವು ಈ ಬಗ್ಗೆ ಸುಪ್ರೀಂ ಕೋರ್ಟ್‌ಗೆ ಹೋದೆವು. ನಾವು ಸುಪ್ರೀಂ ಕೋರ್ಟ್‌ಗೆ ಹೋದ ಮೇಲೆ ಸುಪ್ರೀಂ ಕೋರ್ಟ್‌ನವರು ಕೆಲಸ ಮುಗಿಸುವುದಕ್ಕೆ ನಾವು interfere ಆಗುವುದಿಲ್ಲ. Tribunal ಅನ್ನು constitute ಮಾಡಿ ಎಂದು ಹೇಳಿದರು. Tribunal constitue ಮಾಡಬೇಕಾಗಿರತಕ್ಕಂಥದ್ದಕ್ಕೆ ಅವರು ಹೇಳಿದ ಮೇಲೆ ನಾವೂ ಕಂಪ್ಲೇಂಟ್ ಕೊಟ್ಟೆವು. ನಾವು ಕಂಪ್ಲೇಂಟ್ ಕೊಟ್ಟಿದ್ದು ಎಷ್ಟು ದಿವಸಗಳಾದ ನಂತರ ಎಂದು ನೀವು ಕೇಳುತ್ತೀರಲ್ಲಾ. 11 ತಿಂಗಳು ಅಲ್ಲಿ ತಡವಾಗಿದ್ದರ ಬಗ್ಗೆ ನೀವು ಹೇಳಿದ್ದರೆ ಅಡ್ಡಿಯಿಲ್ಲ. .....

ಶ್ರೀ ಜಗದೀಶ್ ಶೆಟ್ಟರ್ : ಅರ್ಜಿ ಕೊಡುವಲ್ಲಿ ತಡವಾಗಿದ್ದನ್ನು ನೀವು ಹೇಳುವುದಿಲ್ಲ. Two years ತಡವಾಗಿ ಅರ್ಜಿ ಕೊಟ್ಟಿದ್ದನ್ನು ತಾವು ಇಲ್ಲಿ ಹೇಳುತ್ತಿಲ್ಲ.

ಶ್ರೀ ಹೆಚ್. ಕೆ. ಪಾಟೀಲ್ : ನೋಡಿ, ನಾವು ಕರ್ನಾಟಕದವರು ತಡವಾಗಿ ಅರ್ಜಿ ಕೊಟ್ಟಿದ್ದೇವಾ ಅಥವಾ ಸಮಯಕ್ಕೆ ಸರಿಯಾಗಿ ಕೊಟ್ಟಿದ್ದೇವಾ ಅಥವಾ ತಡ ಆಗಿದ್ದರೆ, ಪಾಟೀಲರೇ, ಇಲ್ಲಿ ತಡವಾಗಿದೆ ಅನ್ನುವುದಕ್ಕೆ you make another issue. You bring that subject, you discuss. I am here to reply. But, right now the issue before us is that though it was delayed, ಇವತ್ತು 15 ದಿವಸಗಳಲ್ಲಿ ನಾವು Tribunal ಅನ್ನು constitute ಮಾಡುತ್ತೇವೆ ಎನ್ನತಕ್ಕಂಥ ಸ್ಪಷ್ಟವಾಗಿರತಕ್ಕಂಥ ಉತ್ತರವೊಂದನ್ನು ಕೇಂದ್ರ ಸರ್ಕಾರದವರು ಕೊಡುತ್ತಿದ್ದಾರೆ. ನಾನು ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುವುದೇನೆಂದರೆ, Tribunal ಅನ್ನು 12 ತಿಂಗಳುಗಳಲ್ಲಿ mandatory ಯಾಗಿ constitute ಮಾಡಬೇಕಾಗಿರತಕ್ಕಂಥ ಕೆಲಸವನ್ನು ಅವರು ಮಾಡಲಿ, ಆದರೆ ಅದರ ಜೊತೆ ಜೊತೆಗೇ ಆಂಧ್ರ ಪ್ರದೇಶದವರೇನು ಅಲ್ಲಿ ಇವತ್ತು illegal projects ಅನ್ನು, un-approved projectsಗಳನ್ನೇನು ತೆಗೆದುಕೊಳ್ಳುತ್ತಿದ್ದಾರೋ, ಅವುಗಳನ್ನು ನೀವು ನಿಲ್ಲಿಸಿರಿ. ಅವುಗಳನ್ನು ನಿಲ್ಲಿಸಿರಿ ಎಂದು ನಾವು ಮತ್ತು ನೀವು ಜೊತೆಯಾಗಿಯೇ.....

ಶ್ರೀ ಜಗದೀಶ್ ಶೆಟ್ಟರ್ : ನಿಲ್ಲಿಸಲಿಕ್ಕೆ, legal remedy ಇದೆಯಲ್ಲಾ, ಅದಕ್ಕೆ ನೀವು ಹೋಗಬಹುದಾಗಿತ್ತು. ಆದರೆ ನೀವು ಅದಕ್ಕೆ ಹೋಗುತ್ತಿಲ್ಲವಲ್ಲಾ.

ಶ್ರೀ ಹೆಚ್.ಕೆ. ಪಾಟೀಲ್ : ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಕೇಳಿದ್ದಾರೆಂದು ಈ ಮಾತನ್ನು ನಾನು ಹೇಳುತ್ತಿದ್ದೇನೆ. Legal remedy ಸಲುವಾಗಿಯೇ ನಾವು Supreme Court ಗೆ ಹೋಗಿದ್ದೆವು. Supreme Court ನವರು ಇದನ್ನು ಮಾಡುವುದು ಬೇಡ, ಟಿಬ್ಯೂನಲ್ ಅನ್ನು ಮಾಡ್ರಿ ಎಂದರು. That was the decision of the Supreme Court. That was the agreement in the Supreme Court, ನಿಮ್ಮ ಕೇಂದ್ರ ಸರ್ಕಾರದ ಪ್ರತಿನಿಧಿಗಳು ಅಲ್ಲಿ Tribunal ಮಾಡುವುದಕ್ಕೆ ನಮ್ಮದೇನೂ ತಕರಾರು ಇಲ್ಲ, ನಾವು ಅದನ್ನು ಮಾಡುತ್ತೇವೆ ಎಂದು ಹೇಳುತ್ತಾರೆ. ಆ ದಿಸೆಯೊಳಗೇ ನಾವು Tribunal constitute ಮಾಡಿ ಎಂದು ಕೇಂದ್ರ ಸರ್ಕಾರಕ್ಕೆ ಹೋಗಿದ್ದೇವೆ. ಇದು ಇತಿಹಾಸ. ಆದರೆ ಅದನ್ನು ವಿವರವಾಗಿ ಚರ್ಚೆ ಮಾಡುವಂತಹ

ಸಂದರ್ಭದಲ್ಲಿ ನೀವು ಯಾವಾಗ ಹೇಳುತ್ತೀರೋ ಆವಾಗ ನಾವು ಮಾಡುವುದಕ್ಕೆ ಸಿದ್ಧರಿದ್ದೇವೆ. ಆದರೆ ಈ ಸಂದರ್ಭದಲ್ಲಿ ನಾನು ಮತ್ತೊಮ್ಮೆ ಈ ವೇದಿಕೆ ಮೂಲಕ ಕೇಂದ್ರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ. Tribunal constitute ಮಾಡುತ್ತೇವೆ ಎಂದು ತಾವೇನು ಹೇಳಿದ್ದೀರಿ. ಇದು ನಮಗೆ ಒಂದು ರೀತಿಯಾದಂತಹ ಸಮಾಧಾನ ತಂದಿದೆ. ಅದರ ಜೊತೆ ಜೊತೆಗೆ, ಇವತ್ತೇನು ಆಂಧ್ರ ಪ್ರದೇಶದಲ್ಲಿ illegal projects ನಡೆದಿವೆಯೋ ಅವುಗಳನ್ನು ನಿಲ್ಲಿಸಿರಿ. ಅದರ ಜೊತೆಗೆ ಹತ್ತತ್ತು ಪರವಾನಿಗೆಗಳನ್ನು ತೆಗೆದುಕೊಂಡಂತಹ ನಮ್ಮ ಕರ್ನಾಟಕದ legal projects ಏನಿದ್ದಾವೋ ಅವುಗಳಿಗೆ ಅಡ್ಡಿ ಪಡಿಸಬಾರದು. ಈಗ ಉದಾಹರಣೆಗೆ ಹೇಳುವುದಾದರೆ, Upper Tunga ದಂತಹ Projects ಬಗ್ಗೆ ಆಂಧ್ರ ಪ್ರದೇಶದ ಸರ್ಕಾರದವರು ಮತ್ತು ಆಂಧ್ರ ಪ್ರದೇಶದ ನಾಯಕರುಗಳು ಅದನ್ನು ಇಲ್ಲೀಗಲ್ಲಾಗಿ ನಾವು ಸ್ಟಾರ್ಟ್ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಅದು ತಪ್ಪು. 1993ರಿಂದ ಇಲ್ಲಿಯವರೆಗೆ ಹತ್ತು ಪರವಾನಿಗೆಗಳನ್ನು ಅದಕ್ಕಾಗಿ ನಾವು ಪಡೆದುಕೊಂಡಿದ್ದೇವೆ. Inter-state ಪರವಾನಿಗೆ ಸಹಿತ ಪಡೆದುಕೊಂಡಿದ್ದೇವೆ. ಅದಲ್ಲದೆ, ಎಲ್ಲಾ ಹತ್ತು ಪರವಾನಿಗೆಗಳನ್ನು ಪಡೆದುಕೊಂಡು ಮೇಲೂ ಸಹಿತ ಈ ರೀತಿಯಾಗಿ ಅಪಪ್ರಚಾರ ಮಾಡುವುದು ಅಥವಾ ನಮ್ಮ development projects ಗೆ ಏನೊಂದು ಅಡ್ಡಗಾಲು ಹಾಕುವಂತಹ ಪ್ರಯತ್ನ ಮಾಡುತ್ತಿದ್ದಾರೋ ಅವರಿಗೆ ಎಚ್ಚರಿಗೆ ಕೊಡಬೇಕಾಗಿರತಕ್ಕಂಥದ್ದು ಅಗತ್ಯವಾಗಿದೆ ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಕಾವೇರಿಯ ವಿಚಾರದಲ್ಲಿ ಸನ್ಮಾನ್ಯ ಸಿಂಧ್ಯಾರವರು ಇಲ್ಲಿ ಪ್ರಸ್ತಾಪ ಮಾಡಿದರು. 7ನೇ ತಾರೀಖಿಗೆ Monitoring Committee Meeting ಇದೆ. ಶನಿವಾರ ಅಂದರೆ 2ನೇ ತಾರೀಖಿನ ದಿವಸ ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಾವು ಈಗಾಗಲೇ ಈ ಬಗ್ಗೆ ಸಭೆಯೊಂದನ್ನು ಮಾಡಿದ್ದೇವೆ. ಅವತ್ತು ಏನೇನು ನಮ್ಮ ರಾಜ್ಯದ ವಾಸ್ತವಿಕ ಪರಿಸ್ಥಿತಿ ಇದೆಯೋ ಅದನ್ನೆಲ್ಲಾ ಚರ್ಚೆ ಮಾಡಿದ್ದೇವೆ. ನಮ್ಮ ನಿಲುವು ಏನು ಇರಬೇಕು ಎಂಬುದನ್ನು ಚರ್ಚಿಸಿದ್ದೇವೆ. ನಾವು ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದೇವೆ. ಸಂಕಷ್ಟದಲ್ಲಿದ್ದೇವೆ. ತಾವೇನು ಕಳಕಳಿ ವ್ಯಕ್ತ ಮಾಡಿದಿರೋ ಅದು ನಿಜ. ಕಳೆದ 29 ವರ್ಷಗಳ average ಅನ್ನು ನೋಡಿದರೆ, ಆ average ಗಿಂತ ಶೇಕಡ 60ರಷ್ಟು ಕಡಿಮೆ ನಮ್ಮ in-flow ಗಳಿವೆ. ಇದು ವಾಸ್ತವಿಕವಾದಂತಹ ಪರಿಸ್ಥಿತಿಯಾಗಿದೆ. ಇದಲ್ಲದೆ, ಬೇರೆ ಬೇರೆಯಾಗಿರತಕ್ಕಂಥ ಹಲವಾರು ಆಲೋಚನೆ, ವಿಚಾರ ಹಾಗೂ distress formula ದಲ್ಲಿ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕಂಥ ಒಂದು ಪ್ರಸ್ತಾವನೆ, ನಾವು ಅವರಿಗೆ ಕೊಟ್ಟಿರತಕ್ಕಂಥ ಪ್ರಸ್ತಾವನೆ. ಎಲ್ಲವುಗಳನ್ನೂ 7ನೇ ತಾರೀಖಿನ್ನು ಗಮನದಲ್ಲಿರಿಸಿಕೊಂಡು, ರಾಜ್ಯ ಸರ್ಕಾರದ ನಿಲುವನ್ನು ಪ್ರಸ್ತಾಪ ಮಾಡತಕ್ಕಂಥದ್ದನ್ನು ನಾವು ಮಾಡುತ್ತೇವೆ. 7ನೇ ತಾರೀಖಿನ್ನು ಗಮನದಲ್ಲಿರಿಸಿಕೊಂಡು. ರಾಜ್ಯ ಸರ್ಕಾರದ ನಿಲುವನ್ನು ಪ್ರಸ್ತಾಪ ಮಾಡತಕ್ಕಂಥದ್ದನ್ನು ನಾವು ಮಾಡುತ್ತೇವೆ. 7ನೇ ತಾರೀಖಿಗೆ ಸಭೆ ಇರುವುದರಿಂದ ಸಭೆ ಕರೆಯಲಿಕ್ಕಾಗಿಲ್ಲ. ಮಾಹಿತಿ ಎಲ್ಲಾ ನನ್ನ ಹತ್ತಿರ ಇದೆ. ಆದರೆ ಆ ಮಾಹಿತಿ ಸನ್ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸಿಂಧ್ಯಾರವರಿಬ್ಬರಿಗೂ ಗೊತ್ತಿದೆ. ಈ ಸಂದರ್ಭದಲ್ಲಿ ಆ ಬಗ್ಗೆ ಚರ್ಚೆ ಮಾಡುವುದು ಸರಿಯಲ್ಲ. ಬೇಕಾದರೆ ಮಾನ್ಯ ಉಪಾಧ್ಯಕ್ಷರು ತಮ್ಮ ಕಛೇರಿಯಲ್ಲಿ ಈ ಬಗ್ಗೆ ಸಭೆ ಕರೆದರೆ, ಈ ಮಾಹಿತಿಗಳನ್ನು ಅದರ ಜೊತೆಗೆ ಸರ್ಕಾರ ಹಂಚಿಕೆ ಮಾಡಿಕೊಳ್ಳುತ್ತದೆ. ರಾಜ್ಯ ಸರ್ಕಾರವೇನು ಇವತ್ತು ಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿದೆಯೋ,

ಆ ಪರಿಸ್ಥಿತಿಯ ಸಂಪೂರ್ಣ ವಿವರವನ್ನು CMC ಗೆ ಅಂದರೆ Cauvery Monitoring Committee ಗೆ ಅರಿವು ಮಾಡಿಕೊಡತಕ್ಕಂಥ, ಮನವರಿಕೆಗೆ ಮಾಡಿಕೊಡತಕ್ಕಂಥ ಪ್ರಯತ್ನವನ್ನು ನಮ್ಮ ಮುಖ್ಯ ಕಾರ್ಯದರ್ಶಿಗಳು 7ನೇ ತಾರೀಖು ಮಾಡಲಿದ್ದಾರೆ. ಆವರಿಗೆ ಯಾವುದೇ ವಿವರಗಳು ಬೇಕಿದ್ದರೆ, ಅದನ್ನು ಕೊಡಲಿಕ್ಕೆ ನಾನು ಸಿದ್ಧವಾಗಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಉಪಾಧ್ಯಕ್ಷರೇ, ತಾವು ಮಾನಿಟರಿಂಗ್ ಕಮಿಟಿ ಮುಂದೆ ಆಫಿಷಿಯರ್ ಆಗುವುದಕ್ಕಿಂತ ಮುಂಚೆ ಏನು ಮಾಡಬೇಕೆಂಬ ಬಗ್ಗೆ ನಾನು ಸಲಹೆ ಕೊಟ್ಟಿದ್ದೆ. ಏಕೆಂದರೆ ಇದು ಇನ್ನೊಂದು ಚಳವಳಿಗೆ ದಾರಿ ಮಾಡಿಕೊಡುತ್ತದೆ, ಇನ್ನೊಂದು ದೊಡ್ಡ ರಾದ್ಧಾಂತವಾಗುತ್ತದೆ. ನಾವು ಬಹಳ ತೊಂದರೆಯಲ್ಲಿದ್ದೇವೆ ಎನ್ನುವುದು ನಿಮಗೆ ನಮ್ಮ ನಮಗೆ ಗೊತ್ತಿರತಕ್ಕಂಥ ವಿಚಾರವಾಗಿದೆ. ರೈತರು ಸಹಿತ ಈ ಸಾರಿ ಸಹಕಾರ ಕೊಟ್ಟಿದ್ದಾರೆ. ಯಾರೋ ಭತ್ತದ ಬೆಳೆಯನ್ನು ಇದುವರೆಗೂ ಸಹಿತ ನಾಟಿ ಮಾಡಲಿಕ್ಕೆ ಹೋಗಿಲ್ಲ. ಜೊತೆಗೆ ಕಬ್ಬಿನ ಬೆಳೆಯನ್ನೂ ಸಹಿತ ಕಡಿಮೆ ಮಾಡಿಕೊಂಡಿದ್ದಾರೆ. ರೇಷ್ಮೆ ಬೆಳೆಯನ್ನೂ ಸಹಿತ ಕಡಿಮೆ ಮಾಡಿಕೊಂಡಿದ್ದಾರೆ, ಅದನ್ನು ಹೊಸದಾಗಿ ಏನು ಮಾಡಲಿಕ್ಕೆ ಹೋಗುತ್ತಿಲ್ಲ. ಇಂತಹ ಸನ್ನಿವೇಶದಲ್ಲಿ ನಾನೇನು ಸರ್ಕಾರಕ್ಕೆ ಸಜೆಸ್ಟ್ ಮಾಡಿದ್ದೆ ಎಂದರೆ, ನೀವು ಅಲ್ಲಿಗೆ ಹೋಗುವುದಕ್ಕೆ ಮುಂಚೆ ಅಲ್ಲಿ ಏನು ಹೇಳುತ್ತೀರಿ ಎನ್ನುವುದನ್ನು all party floor leaders meeting ವೊಂದನ್ನು ಕರೆದು ನಮ್ಮ ಗಮನಕ್ಕೆ ತರಬೇಕು. ನಾನು ಈ ಬಗ್ಗೆ ಅವತ್ತೂ ಸಹ ಮನವಿ ಮಾಡಿಕೊಂಡಿದ್ದೆ. ಮಾನ್ಯ ಚಂದ್ರೇಗೌಡರು ಆಗ ಸಭೆಯಲ್ಲಿದ್ದರು, ನಾವು ಆ ಬಗ್ಗೆ ತಮ್ಮನ್ನೆಲ್ಲಾ ಕರೆಸುತ್ತೇವೆ, ಇದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿದ್ದರು. ಆದರೆ ಇದುವರೆಗೂ ಸರ್ಕಾರದವರು ನಮ್ಮನ್ನೇನೂ ಕರೆಸಿಲ್ಲ. ಕರೆಸಲಿಕ್ಕೆ ನಿಮಗೆ ತೊಂದರೆ ಏನಿದೆ ಎಂಬುದು ನನಗೆ ಗೊತ್ತಾಗಲಿಲ್ಲ. ಇನ್ನೊಂದು ಅಂಶವನ್ನು ಮಾನ್ಯ ಮಂತ್ರಿಗಳು ಸ್ಪಷ್ಟ ಪಡಿಸಬೇಕು. ಪರಗೋಡು ವಿಚಾರದಲ್ಲಿ ಹೈಟ್ ಅನ್ನು ಕಡಿಮೆ ಮಾಡಬೇಕು ಅನ್ನತಕ್ಕಂಥ ಸೂಚನೆಯನ್ನು ನಾವು ಕರ್ನಾಟಕಕ್ಕೆ ಕೊಟ್ಟಿದ್ದೇವೆ, ಆ ಬಗ್ಗೆ ಕರ್ನಾಟಕ ಸರ್ಕಾರಕ್ಕೆ ಬರೆದು ತಿಳಿಸಿದ್ದೇವೆ ಅನ್ನತಕ್ಕಂಥ ಮಾತನ್ನು ಮಾನ್ಯ ಕೇಂದ್ರ ಸಚಿವರು ನಿನ್ನೆ ಸಂಸತ್ ನಲ್ಲಿ ಹೇಳಿದ್ದಾರೆ. ಅದು ನಿಜವೇ? ಅದು ನಿಜವಾಗಿದ್ದರೆ ನಾವು ಅದರ ಬಗ್ಗೆ protest ಮಾಡಬೇಕಾಗುತ್ತದೆ. ಅದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ನಾನು ಕೋರುತ್ತೇನೆ.

ಶ್ರೀ ಹೆಚ್.ಕೆ. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಅರ್ಜುನ್ ಚರಣ್ ಸೇಥಿಯವರು ಆ ರೀತಿಯಾಗಿ ಹೇಳಿದ್ದಾರೆ ಎನ್ನುವಂತಹ ಸ್ಪಷ್ಟವಾಗಿರತಕ್ಕಂಥ ಮಾತುಗಳಿಲ್ಲ. ಆದರೆ ಅವರು ನಮಗೆ ಬರೆದಿರತಕ್ಕಂಥ ಪತ್ರದ ಬಗ್ಗೆ ಉಲ್ಲೇಖ ಮಾಡಿದ್ದಾರೆ. ನಮಗೆ ಬರೆದಿರತಕ್ಕಂಥ ಪತ್ರದಲ್ಲಿ ಅವರು ಹೇಳಿರುವುದು ಇಷ್ಟೇ. "ಕರ್ನಾಟಕದವರು ತೆಗೆದುಕೊಂಡಿರತಕ್ಕಂಥ ಪರಗೋಡು ಯೋಜನೆ, ಇದು Drinking Water Project ಆಗಿದೆ, ಇದು National Parameters ಏನಿದೆಯೋ, ಆ National Parameters ಪ್ರಕಾರ ಇರಬೇಕಾಗಿರತಕ್ಕಂಥ ಅವಶ್ಯಕತೆ ಇದೆ" ಅನ್ನುವುದನ್ನು ಅವರು ನಮಗೆ ಪತ್ರದಲ್ಲಿ ಬರೆದಿದ್ದಾರೆ. ಹೈಟ್ ಬಗ್ಗೆ ಪತ್ರದಲ್ಲಿ ಎಲ್ಲಿಯೂ ಅದರ ಬಗ್ಗೆ ಪ್ರಸ್ತಾಪ ಇಲ್ಲ. ಆ ರೀತಿ ಹೇಳುವುದಕ್ಕೆ ಸಾಧ್ಯವಿಲ್ಲ ಅನ್ನುವಂತಹ ಸಂಪೂರ್ಣವಾದ ವಿಶ್ವಾಸವನ್ನು ನಾನು ಈ ಸಂದರ್ಭದಲ್ಲಿ ಹೊಂದಿದವನಾಗಿದ್ದೇನೆ. ಆದರೂ ಕೂಡ ಈ ಬಗ್ಗೆ ಕೆಲವೊಂದು ಪತ್ರಿಕೆಗಳಲ್ಲಿ ಬಂದಿರತಕ್ಕಂಥದ್ದನ್ನು ತಾವೇನು ಇಲ್ಲಿ ಪ್ರಸ್ತಾಪ ಮಾಡಿದ್ದೀರೋ, ಅದರ ಬಗ್ಗೆ ಹೆಚ್ಚಿನ ವಿವರಗಳನ್ನು

ನಾವು ಪಡೆದುಕೊಳ್ಳುತ್ತೇವೆ. ಸನ್ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಸಿಂಧ್ಯಾರವರು ಒತ್ತಾಯಿಸಿದ ಹಾಗೆ, ತಾವು ನಮ್ಮನ್ನು ಈ ಬಗ್ಗೆ ಸಭೆಯೊಂದಕ್ಕೆ ಕರೆದಿದ್ದೇ ಆದಲ್ಲಿ, ಅವರನ್ನೂ ಕರೆಯಿರಿ. ಏನು ವಿವರ ಇದೆ ಅದನ್ನು ಹಂಚಿಕೆ ಮಾಡಿಕೊಳ್ಳುತ್ತೇನೆ. ನಾನು ಬೇಕಾದರೆ ಖಾಸಗಿಯಾಗಿ ಕೆಲವು ಕಾಗದಗಳನ್ನು ಕಳುಹಿಸಿಕೊಡುತ್ತೇನೆ.

ಇ) **ತೀರ್ಥಹಳ್ಳಿ ತಾಲ್ಲೂಕಿನ ಮೂವಳ್ಳಿಯ ನಾರಾಯಣ ಎಂಬುವವರು ಪಾಕೀಸ್ತಾನದಲ್ಲಿ ಸೆರೆಮನೆ ವಾಸ ಅನುಭವಿಸಿದ್ದು ಪುನರ್ವಸತಿಗೆ ಸರ್ಕಾರದಿಂದ ಸಹಾಯ ನೀಡುವ ಬಗ್ಗೆ.**

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉಪಾಧ್ಯಕ್ಷರೇ, ನನ್ನ ಕ್ಷೇತ್ರದ ತೀರ್ಥಹಳ್ಳಿ ತಾಲ್ಲೂಕಿನ ಮಂಡಗದ್ದೆ ಹತ್ತಿರದ ಮಾವಳ್ಳಿಯ ನಾರಾಯಣ ಎನ್ನುವಂತಹ ಒಬ್ಬ ವ್ಯಕ್ತಿ 21 ವರ್ಷಗಳ ಕಾಲ ಪಾಕಿಸ್ತಾನದ ಜೈಲಿನಲ್ಲಿ ಬಂದಿಯಾಗಿದ್ದು ಮೊನ್ನೆ ಜುಲೈ 7ನೇ ತಾರೀಖು ಬಿಡುಗಡೆಯಾಗಿ ಊರಿಗೆ ಬಂದಿರತಕ್ಕಂಥ ವಿಚಾರವನ್ನು ಈ ಸದನದ ಮೂಲಕ ಸರ್ಕಾರದ ಗಮನಕ್ಕೆ ತರಬೇಕೆಂದು ನಾನು ಬಯಸುತ್ತೇನೆ. ನಾರಾಯಣ ಎನ್ನುವಂತಹ ವ್ಯಕ್ತಿ ಮಂಡಗದ್ದೆ ಹತ್ತಿರದ ಮೂವಳ್ಳಿ ಅನ್ನುವಂತಹ ಒಂದು ಗ್ರಾಮದ ಒಬ್ಬ ಕೃಷಿ ಕಾರ್ಮಿಕ ಕುಟುಂಬದವನು. 1978ರಲ್ಲಿ ಬೆಂಗಳೂರಿನಲ್ಲಿ ಬಂದು ಸತ್ಕಾರ್ ಹೋಟೆಲ್‌ನಲ್ಲಿ ಕೆಲಸ ಮಾಡಿದಂತಹ ವ್ಯಕ್ತಿ ಡ್ರೈವಿಂಗ್ ಕಲಿತು ಬಾಂಬೆಯಲ್ಲಿ ಒಂದು ಕಾರ್ ಡ್ರೈವಿಂಗ್ ಗೆಂದು ಹೋದಂತಹ ಮನುಷ್ಯ ಇನ್ನೊಂದಷ್ಟು ಹೆಚ್ಚು ಸಂಬಳ ಬರುತ್ತದೆಂಬ ಉದ್ದೇಶದಿಂದ ಮೀನುಗಾರಿಕೆಯ ಯಾಂತ್ರೀಕೃತ ಬೋಟ್‌ನ ಒಬ್ಬ ಮೆಕ್ಯಾನಿಕ್ಕಾಗಿ ಸೇರಿಕೊಳ್ಳುತ್ತಾನೆ. 1982ನೇ ಇಸವಿಯ ಒಂದು ಮಳೆಗಾಲದ ರಾತ್ರಿ ಇವನು ಯಾಂತ್ರೀಕೃತವಾದಂತಹ ಬೋಟ್‌ನಲ್ಲಿ ಮೆಕ್ಯಾನಿಕ್ಕಾಗಿ ಕೆಲಸಕ್ಕೆ ಹೋದಂತಹ ಸಂದರ್ಭದಲ್ಲಿ ಆತ ಕೆಲಸ ಮಾಡುತ್ತಿರತಕ್ಕಂಥ ಬೋಟ್ ಬಿರುಗಾಳಿಗೆ ಸಿಕ್ಕಿದ್ದರಿಂದಾಗಿ ಅದು ಎಲ್ಲಿಗೆ ಹೋಗುತ್ತಿದೆ ಎನ್ನುವುದರ ಅಂದಾಜು ಆಗಲಿಲ್ಲ. ಬೆಳಗಾಗಿ ನೋಡುವಷ್ಟರಲ್ಲಿ ಅವರು ಪಾಕಿಸ್ತಾನದ ಬಾರ್ಡರ್ ಒಳಗಡೆ ಹೋಗಿದ್ದರು. ಪಾಕಿಸ್ತಾನದ ಮಿಲಿಟರಿಯವರು ಇವರನ್ನು ಸುತ್ತುಗಟ್ಟಿ ನಾರಾಯಣ ಮತ್ತು ಸುಮಾರು 13–14 ಜನರು ಇದ್ದಂತಹ ಬೋಟ್ ಅನ್ನು ಪಾಕಿಸ್ತಾನಕ್ಕೆ ತೆಗೆದುಕೊಂಡು ಹೋಗಿ, ಇವರನ್ನು ಸಿಕ್ಕಾಪಟ್ಟೆ ಚಚ್ಚುತ್ತಾರೆ. ಸುಮಾರು ಎರಡು ತಿಂಗಳುಗಳ ಕಾಲ, ಬಹುಶಃ ಬದುಕಿದ್ದೇ ದೊಡ್ಡ ಮಾತು, ಆತನ ಮಾತಿನಲ್ಲಿ, ಆತನನ್ನು ಸಿಕ್ಕಾಪಟ್ಟೆ ಥಳಿಸಿ, ಇವರು ಭಾರತದ ಏಜೆಂಟರು, ಅವರು ಗೂಢಾಚಾರ ಮಾಡಲಿಕ್ಕಾಗಿ ಬಂದಿದ್ದಾರೆ ಎಂದು ಶಂಕಿಸಿ ಅದರ ಬಗ್ಗೆ ಅವರ ಬಾಯನ್ನು ಬಿಡಿಸಲಿಕ್ಕೆ ಎರಡು ತಿಂಗಳಿನಿಂದ ಪ್ರಯತ್ನಪಟ್ಟರೂ ಕೂಡ ಅವರಿಂದ ಅದು ಆಗಲಿಲ್ಲ.

21 ವರ್ಷಗಳ ಕಾಲ ಸೆರೆಮನೆಯಲ್ಲಿ ಕೂಡಿ ಹಾಕಿ, ಕೇವಲ ಎರಡು ರೊಟ್ಟಿಗಳನ್ನು ಮೂರು ಹೊತ್ತಿನಲ್ಲಿ ಕೊಟ್ಟು, ಬೆಳಗಾಗುವುದು ಸಂಜೆಯಾಗುವುದು ಗೊತ್ತಾಗದ ರೀತಿಯಲ್ಲಿ ಕತ್ತಲಿನ ಶೆಲ್ ನಲ್ಲಿ ಕೊಳೆಯುತ್ತಿದ್ದೆ ಎನ್ನುವುದನ್ನು ಆತ ಹೇಳುತ್ತಿದ್ದಾನೆ. 21 ವರ್ಷಗಳ ನಂತರ ಜುಲೈ 2ನೇ ತಾರೀಖು ಆತನನ್ನು ಬಿಡುಗಡೆ ಮಾಡಿದ್ದಾರೆ. ಜಮ್ಮುವಿನ ಬಾರ್ಡರ್‌ನಲ್ಲಿ ನಮ್ಮ ಮಿಲಿಟರಿಯವರ ಕೈಗೆ ಕೊಟ್ಟಿದ್ದಾರೆ. ಆ ಮಿಲಿಟರಿಯವರು ಅವರನ್ನು ತಪಾಸಣೆ ಮಾಡಿ ಭಾರತದ ನಕಾಶೆಯನ್ನು ತೋರಿಸಿ ನಿನ್ನ ಊರು ಯಾವುದು, ಯಾವ ಭಾಗದಲ್ಲಿ ಬರುತ್ತದೆ ಎಂದು ಕೇಳಿದಾಗ ಕರ್ನಾಟಕದ ಭಾಗದಲ್ಲಿ ಬೆರಳಿಟ್ಟು, ನಾಸಿಕ್ ಕಡೆ ತೋರಿಸಿದ್ದರಿಂದ ನಮ್ಮ ಮಿಲಿಟರಿಯವರು